ಎರೆಬೀಡು ಬಿಟ್ಟ ಹೊಲದಂತಾಗಿರುವ, ಮುದುಡಿಯಾದ ಕಾಗದದಂತಾಗಿರುವ ಅವಳ ಮುಖವನ್ನು ನೋಡಿದ ಹಲವು ತರುಣ ಹೆಂಗಸರು ವಯಸ್ಸಾದ ಮೇಲೆ ತಮ್ಮ ನಯ ನಾಜೂಕಿನ ವದನ ಹೀಗೆ ಪರಿವರ್ತನೆಯಾಗುತ್ತದೆಯೇ ಎಂದು ಹೆದರಿ ಹರೆಯದವರಿದ್ದಾಗಲೇ ಸತ್ತುಹೋದರೆ ಚೆನ್ನಾಗಿರುತ್ತದೆ ಎಂದು ಮನಸ್ಸಿನಲ್ಲಿ ಅಂದುಕೊಂಡರು. ನೂರಾರು ಮಡಿಕೆಯಾಗಿರುವ ಚರ್ಮವೋ, ತುಂಡಾದಂತೆ ಬಾಗಿರುವ ಬೆನ್ನೋ, ಪಾತಾಳಕ್ಕೆ ಹೋಗಿರುವ ಕಣ್ಣುಗಳೋ, ನಡುಗುವ ಕೈಗಳೋ, ಸೊರ್ ಸೊರ್ ಎನ್ನುವ ಧ್ವನಿಯೋ – ಇವಳು ಮುದುಕಿಯಲ್ಲ, ಬದಲಾಗಿ ಮುದುಕಿಯೆಂಬ ಆಕಾರದಲ್ಲಿ ಬೇತಾಳವೆಂದು ಅವ್ವ ಹಂಗಿಸಿದಳು. ಅವ್ವನ ಮನಸ್ಸಿನಲ್ಲಿ ಎಷ್ಟೆಲ್ಲ ಸೇಡು ಇದೆ! ಅಡಿವೆಮ್ಮನ ಮಾತು ಬಂದಾಗಲೆಲ್ಲ ಅವ್ವ ಕಟಕಟ ಹಲ್ಲು ಕಡಿಯುತ್ತಾಳೆ. ನನಗೆ ಆಶ್ಚರ್ಯವಾಗುತ್ತಿತ್ತು.

ಈ ಅಜ್ಜಿಗೆ ಅಗದೀ ಕಮ್ಮಿತಕಮ್ಮಿಯೆಂದರೂ ನೂರಾ ನಾಲ್ಕು ವಯಸ್ಸು ಎಂದು ಹೇಳುತ್ತಿದ್ದರು. ಆದರೆ ತನಗಿನ್ನೂ ನೂರು ಆಗಿಲ್ಲ ಎಂಬುದು ಅವಳ ವಾದ. ತನ್ನ ವಯಸ್ಸು ಹೇಳಲಿಕ್ಕೆ ಆಕೆ ಯಾವಾಗಲೂ ಹಿಂದು, ಮುಂದು ನೋಡುತ್ತಾಳೆ. ರೇಷನ್ ಕಾರ್ಡಿನಲ್ಲಿ ಅವಳ ವಯಸ್ಸು ತೊಂಬತ್ತೆಂಟು ಅಂತ ಇದೆ. ಆದರೆ ಆಧಾರ ಕಾರ್ಡಿನಲ್ಲಿ ನೂರಾ ಎರಡು ಅಂತ ಬಂದಿದ್ದಕ್ಕೆ ಸಿಟ್ಟು ಮಾಡಿಕೊಂಡು ಅದನ್ನು ತಿದ್ದುಪಡಿಗೆ ಕಳಿಸಿದ್ದಾಳೆ. ಅವಳು ವಯಸ್ಸು ಅರವತ್ತು ಆದಾಗಲೂ ಅವಳು ಇನ್ನೂ ಮೂವತ್ತರ ಆಸುಪಾಸು ಇದ್ದವಳೆಂದು ತೋರುತ್ತಿದ್ದುದರಿಂದ ದಕ್ಷಿಣ ಭಾರತದ ಅನೇಕ ನಟಿಯರು ಗುಟ್ಟಾಗಿ ಅವಳಲ್ಲಿಗೆ ಬಂದು ಅವಳು ಉಣ್ಣುವ ಅಡಿಗೆ, ಕುಡಿಯುವ ನೀರು, ಮಲಗುವ ಚಾಪೆಗಳನ್ನು ನೋಡಿಕೊಂಡು ಹೋದರೆಂದು ಹೇಳುತ್ತಾರೆ. ಹಾಗೆ ಹೋಗುವಾಗ ಅಜ್ಜಿ ಉಣ್ಣುತ್ತಿದ್ದ ಹುಳಿಯಂಬಲಿ, ಹುಳಿನುಚ್ಚು, ಸಜ್ಜಿ ರೊಟ್ಟಿ, ಪುಂಡಿಪಲ್ಲೆ, ಹುಳ್ಳಿಯ ಸಂಕಟಿ ಮುಂತಾದ ತಿನಿಸುಗಳನ್ನು ಕಾರಿನಲ್ಲಿ ಉಳ್ಳದಂತೆ ಕಟ್ಟಿಕೊಂಡು ಹೋಗಿದ್ದರು. ಮುಂದಿನ ದಿನಮಾನಕ್ಕಾಗುವಷ್ಟು ದಿನಸಿಗಳನ್ನು ಹೊತ್ತ ಟ್ರಕ್ ಅವರನ್ನು ಹಿಂಬಾಲಿಸಿತ್ತು. ಸಿನಿಮಾ ಮಂದಿಗೆ ತನ್ನ ರಹಸ್ಯಗಳನ್ನು ಹೇಳಿಕೊಟ್ಟು ಆವಾಗ ತಾನು ತಪ್ಪು ಮಾಡಿದೆ ಎಂದು ಒಮ್ಮೊಮ್ಮೆ ಈಕೆ ಕೊರಗುವುದುಂಟು. ಅವಳ ಕೊರಗಿನಲ್ಲಿ ತಪ್ಪು ಹುಡುಕುವ ಹಾಗಿರಲಿಲ್ಲ. ಯಾಕೆಂದರೆ ಇವಳಿಂದ ಕಲಿತಿದ್ದಕ್ಕೆ ಅವರು ಸ್ವಲ್ಪವಾದರೂ ಋಣ ಇಟ್ಟುಕೊಳ್ಳಬಾರದೆ? ಮತ್ತೂ ತಮ್ಮ ಸೌಂದರ್ಯದ ಕಾರಣ ಅದೇ ಹಾಳುಮೂಳು ಸಾಬೂನು ಅಂತ ಜಾಹೀರಾತು ತೋರಿಸುವಾಗ ಮುದುಕಿಗೆ ಸಿಟ್ಟು ಬರಲಾರದೆ? ಹೇಮಾಮಾಲಿನಿ, ಐಶ್ವರ್ಯ ರೈ ಮುಂತಾದವರೆಲ್ಲ ಮತ್ತೊಮ್ಮೆ ತನ್ನ ಹತ್ತಿರ ಬರಲಿ, ಸರಿಯಾದ ಪಾಠ ಕಲಿಸುತ್ತೇನೆಂದು ಕಾಯುತ್ತಿದ್ದಾಳೆ. ಹಾಗೆ ನೋಡಿದರೆ ಅವಳು ನಮ್ಮ ಸ್ವಂತ ಅಜ್ಜಿಯೇನಲ್ಲ ಮತ್ತು ಅಪ್ಪ–ದೊಡ್ಡಪ್ಪ ಅವಳ ಖಾಸಾ ಮಕ್ಕಳೇನಲ್ಲ. ದೂರದ ಸಂಬಂಧ ಇಷ್ಟು ದೂರ ಹಾಗೆಯೇ ನಡೆದುಕೊಂಡು ಬಂದಿತ್ತು.

ಅಂತಹ ಉಪಕಾರವನ್ನು ಮಾಡಿದವಳನ್ನು ಕಡೆಗಣಿಸಲಾದೀತೆ? ಅದಕ್ಕಾಗಿ ಅವಳಿಗೆ ಹಿಂದೊಮ್ಮೆ ವರ್ಷಾನುಗಟ್ಟಲೆ ಆಶ್ರಯ ಕಲ್ಪಿಸಿದ್ದರು. ಅದೂ ಅಲ್ಲದೆ ಅಪ್ಪ ಆವಾಗವಾಗ ತೇರದಾಳಕ್ಕೆ ಹೋಗಿ ಎರಡು ಮೂರು ದಿನ ಇದ್ದು ಅಜ್ಜಿಯ ಕ್ಷೇಮ ಸಮಾಚಾರ ವಿಚಾರಿಸಿ ಬರುತ್ತಿದ್ದ. ಒಮ್ಮೊಮ್ಮೆ ಅವ್ವನಿಂದ ಸಿಹಿತಿನಿಸು ಮಾಡಿಸಿ ಒಯ್ಯುವನು. ಇತ್ತೀಚಿನ ಕೆಲವು ವರ್ಷಗಳಲ್ಲಿ ಆ ಮುದುಕಿಯ ಸಂಪರ್ಕ ತಪ್ಪಿ ಒಳ್ಳೆಯದಾಯಿತೆಂದು ಅವ್ವ ಖುಷಿಯಿಂದಿದ್ದಳು. ಯಾವಾಗ ದೊಡ್ಡಪ್ಪ ತನ್ನ ಮಗನ ಮದುವೆಗೆಂದು ಗೊತ್ತಿದ್ದವರನ್ನೂ ಗೊತ್ತಿಲ್ಲದವರನ್ನೂ ಕಲೆ ಹಾಕತೊಡಗಿದನೋ ಆಗ ಮುದುಕಿಗೆ ಅನಾಯಾಸ ಈ ಊರಿಗೆ ಬರುವ ಅವಕಾಶ ಒದಗಿಬಂದಿತು. ಬರುವುದು ತನ್ನ ಕೈಯಲ್ಲಿ, ಹೋಗುವುದು ಮಾತ್ರ ತನ್ನ ಕೈಯಲಿಲ್ಲವೆನ್ನುವಂತೆ ಆಕೆ ತಿರುಗಿ ಹೋಗುವ ಮಾತನ್ನೇ ಆಡುತ್ತಿರಲಿಲ್ಲ. ಆಕೆ ಈ ಓಣಿಯಲ್ಲಿ ಖಾಯಂ ಆಗಿ ತಳವೂರಲು ಬಂದಿರಬಹುದೆಂದು ಮಂದಿ ಹೇಳುವುದು ಸುಳ್ಳೇನಲ್ಲ.

ಮದುವೆ ಮುಗಿದ ಮೇಲೆ ಅಗಸಿಯಲ್ಲಿನ ಕರೆಮ್ಮನ ಗುಡಿಯ ದುರಸ್ತಿಗೆ ನಿಂತಿದ್ದಾಳೆ. ಅವಳು ಯೌವನದಲ್ಲಿದ್ದಾಗ ಆ ಗುಡಿ ಕಟ್ಟಬೇಕಾದರೆ ಅದರ ದೇಖರೇಖಿಯನ್ನು ಅವಳೇ ನೋಡಿಕೊಂಡಿದ್ದಳಂತೆ. ಆಗಷ್ಟೇ ಮದುವೆಯಾಗಿ ಬಂದಿದ್ದ ಅವ್ವ ತಲೆಯ ಮೇಲೊಂದು, ನಡದಲ್ಲೊಂದು ಹೀಗೆ ಜೋಡುಗೊಡ ಹೊತ್ತು ಆ ಕಟ್ಟಡಕ್ಕೆ ಹಳ್ಳದಿಂದ ನೀರು ಹೊತ್ತಿದ್ದಳು. ದಿನದ ಇಪ್ಪತ್ನಾಲ್ಕು ಗಂಟೆ ಆ ಕೆಲಸ, ಈ ಕೆಲಸ ಎಂದು ಅವ್ವನನ್ನು ಅವಿಶ್ರಾಂತ ದುಡಿಮೆಗೆ ಹಚ್ಚಿದ್ದಳು. ಬೇರೆ ಊರಲ್ಲಿ ನೌಕರಿಗಿದ್ದ ಅಪ್ಪ ತಾನು ಊರಿಗೆ ಬಂದಾಗ 'ಅವ್ವ ಹೇಳಿದಷ್ಟು ಕೇಳಿಕೊಂಡು ಬಿದ್ದಿರು' ಎನ್ನುವ ಮಾತನ್ನು ಬಿಟ್ಟು ಬೇರೆ ಮಾತು ಆಡುತ್ತಿರಲಿಲ್ಲ. ಗಂಡನಿಗೆ ಬುದ್ಧಿ ಬಂದದ್ದು ಎಲ್ಲ ಕಳಕೊಂಡ ಮೇಲೆಯೇ ಎಂದು ಅವ್ವ ದೂರುತ್ತಾಳೆ. ಆ ಸಮಯದಿಂದಲೇ ಅವ್ವ ಮತ್ತು ಅಜ್ಜಿಗೆ ಆಗಿಬರುವುದಿಲ್ಲ. ಒಂದು ದಿನ ನೀರು ತರಲೆಂದು ಹೋದ ಅವ್ವ ಬಹಳ ಹೊತ್ತಿನವರೆಗೆ ಬಾರದಿದ್ದುದಕ್ಕೆ ಮುದುಕಿ ಹೋಗಿ ನೋಡಿದಳು. ಅವ್ವ ಅಪರಿಚಿತ ಗಂಡಸಿನಿಂದ ಕೊಡ ಹೊರಿಸಿಕೊಳ್ಳುವುದನ್ನು ಕಂಡು ಕನಲಿದಳು. ಏನೇನೋ ಅಂದು, ಅವ್ವನ ಬಿಂದಿಗೆಯನ್ನು ದಾರಿಯಲ್ಲಿ ಒಡೆದುಹಾಕಿ ತವರುಮನೆಗೆ ಕಳಿಸಿದ್ದಳು. ಅಪ್ಪನಿಗೆ ಇನ್ನೊಂದು ಮದುವೆ ಮಾಡುತ್ತೇನೆಂದು ಓಡಾಡಿದಳಂತೆ. ಮುಂದೆ ಗುಡಿ ಕಟ್ಟುವುದು ಮುಗಿದು ಅಡಿವೆಮ್ಮ ತನ್ನ ಊರಿಗೆ ತಾನು ಹೋದಳು. ತಾನು ಈ ಊರಲ್ಲಿರುವವರೆಗೂ ಅಪ್ಪನಿಗೆ ಚಾಡಿ ಹೇಳಿ ಅವ್ವನನ್ನು ಬರಗೊಟ್ಟಿರಲಿಲ್ಲ.

ಅಪ್ಪನಿಗೆ ನೌಕರಿ ಬಂದಾಗ ಅವನನ್ನು ಇದ್ದೂರಿಗೆ ಬರುವಂತೆ ಮಾಡಿದವನು ದೊಡ್ಡಪ್ಪನೆ. 'ಅಣ್ಣ ದೊಡ್ಡ ಧರ್ಮರಾಯ, ಇಂವ ಕೇಳಕೊಂತ ಕುಂತ.' ಅವ್ವ ವಟಗುಟ್ಟುತ್ತಲೆ ಇರುತ್ತಾಳೆ. ದೊಡ್ಡಪ್ಪನ ದೆಸೆಯಿಂದ ತಾವು ಏನೆಲ್ಲ ಅನುಭವಿಸಬೇಕಾಯಿತೆಂದು ಅಪ್ಪ, ಅವ್ವ, ಅಕ್ಕ ಒಮ್ಮೊಮ್ಮೆ ರಾತ್ರಿಯೆಲ್ಲ ಮಾತನಾಡುತ್ತ ಕುಳಿತುಕೊಳ್ಳುತ್ತಿದ್ದರು. ದೊಡ್ಡಪ್ಪನ ಮನೆಯ ಯಾರಾದೊಬ್ಬರು, ಯಾವಾಗ, ಎಷ್ಟೊತ್ತಿಗೆ ನೆರವು ಕೇಳಬರುತ್ತಾರೆಂಬ ಅಂದಾಜು ಕೂಡ ಇರುವುದಿಲ್ಲ. ಬದಗ್ಗನೆ ಬರುತ್ತಾರೆ. ಬದಗ್ಗನೆ ಏನಾದರೊಂದು ಮನಸ್ಸಿಗೆ ಹತ್ತುವ ಮಾತು ಹೇಳಿಹೋಗುತ್ತಾರೆ. ಬ್ಯಾಂಕಿನಲ್ಲಿದ್ದ ಅಪ್ಪನ ನಿವೃತ್ತಿಯ ಹಣ ಹತ್ತು ಲಕ್ಷ ರೂಪಾಯಿಯ ಮೇಲೆಯೇ ಎಲ್ಲರ ಕಣ್ಣು. ಮದುವೆ ಖರ್ಚಿಗೆಂದು ದೊಡ್ಡಪ್ಪ ಎರಡು ಲಕ್ಷ ರೂಪಾಯಿ ಸಾಲ ಕೇಳಿದ. ಇಸಿದುಕೊಳ್ಳುವಾಗಲೆಲ್ಲ ಆತ ಸಾಲವೆಂದೇ ಇಸಿದುಕೊಳ್ಳುತ್ತಿದ್ದ. ಅಪ್ಪ ಈ ಸಲ ಧೈರ್ಯ ಮಾಡಿ ಇಲ್ಲವೆಂದ. ಆತ ಗುರುಗುಟ್ಟುತ್ತ ಹೋದ. ಇಷ್ಟೆಲ್ಲ ವೈರವಿದ್ದರೂ ಮದುವೆ, ಸೀಮಂತ ಮುಂತಾದ ಸಂದರ್ಭಗಳಲ್ಲಿ ನಮ್ಮನ್ನು ಬಿಟ್ಟರೆ ಆ ಮನೆಯವರೆಲ್ಲರ ಹೃದಯ ಬಡಿತವೇ ನಿಂತುಬಿಡುತ್ತದೆ ಎನ್ನುವಂತೆ ಮನೆಗೆ ಬಂದು ಕರೆಯುವರು. ಕರೆದ ಮೇಲೆ ಹೋಗದಿದ್ದರೆ ಹೇಗೆ? ಇದು ತನ್ನ ಕಾಣಿಕೆ ಎಂದು ಅಪ್ಪ ಈ ಸಲ ಮದುಮಗನ ಕೊರಳಿಗೆ ಒಂದು ಚಿನ್ನದ ಸರ ಮಾಡಿಸಿದ. ದೊಡ್ಡಪ್ಪನ ಮುಖದಲ್ಲಿ ಮಂದಹಾಸ ಮೂಡಿತು. ಹೇಗಿದೆ, ಹೊಂದುತ್ತದೆಯೇ ನಾವು ಆ ಸರವನ್ನು ಅಣ್ಣನ ಕೊರಳಿಗೆ ಹಾಕುವುದಕ್ಕೂ ಮದುವೆಗೆಂದು ಮುದುಕಿ ಅವರ ಮನೆಗೆ ಕಾಲಿಡುವುದಕ್ಕೂ ಸರಿಹೋಯಿತು.

ಯಾವ ಗಳಿಗೆಯಲ್ಲಿ ನಾವು ಅವರ ಮನೆಗೆ ಹೋದೆವೋ, ಯಾವ ಗಳಿಗೆಯಲ್ಲಿ ಅವಳು ಅಪ್ಪ–ಅವ್ವನನ್ನು ಮಾತಾಡಿಸುತ್ತ ಹಿಂದಿನ ಚರಿತ್ರೆಯನ್ನು ತಿರುವಿ ಹಾಕತೊಡಗಿದಳೋ ಆವಾಗಿನಿಂದ ನಮ್ಮ ಮನೆಯಲ್ಲಿ ಸಮಾಧಾನವೇ ಇಲ್ಲದಂತಾಯಿತು. 'ಮಗಗ ಕೊಟ್ಟೇಪಾ, ಮತ್ತ ಈ ವಯಸ್ಸಾದ ತಾಯಿಗೆ ಏನು ಕೊಡಾಂವ?' ಮುದುಕಿ ಆ ಕ್ಷಣದಿಂದಲೇ ಸುರು ಮಾಡಿದಳು. ಅವರ ನಂಟು–ಗಂಟು ಬೇಡವೆಂದೇ ಹಳ್ಳಿಯಲ್ಲಿದ್ದ ಎಲ್ಲ ಹೊಲ–ಮನೆಯನ್ನು ಅವರಿಗೆ ಕೊಟ್ಟಾಗಿದೆ. ಆದರೂ ಅವರು ಏನಾದರೊಂದು ನೆಪ ಹುಡುಕಿ ನಮ್ಮೊಡನೆ ತಳಕು ಹಾಕಿಕೊಳ್ಳುತ್ತಾರೆ. ಹೇಗೂ ನನಗೆ ಹುಬ್ಬಳ್ಳಿಯ ಕಡೆಗೆ ನೌಕರಿ ಸಿಕ್ಕಿದೆ. ಇನ್ನೆರಡು ತಿಂಗಳಲ್ಲಿ ನಾನ್ಯಾರೋ, ಈ ಮುದುಕಿಯಾರೋ, ಈ ದೊಡ್ಡಪ್ಪನ್ಯಾರೋ. ಅವ್ವ, ಅಪ್ಪನನ್ನು ಕೂಡ ಅಲ್ಲಿಗೆ ಕರೆದೊಯ್ಯುತ್ತೇನೆ. ಅಕ್ಕ ಹೇಗೂ ಗಂಡನ ಮನೆಯಲ್ಲಿದ್ದಾಳೆ. ಈ ಸಂಬಂಧಗಳನ್ನು ಕಡಿದುಕೊಂಡು ದೂರ ಹೋಗಲು ಇದಕ್ಕಿಂತ ಒಳ್ಳೆಯ ಸಮಯ ಬರಲಿಕ್ಕಿಲ್ಲ. ಆದರೆ ಅವ್ವ–ಅಪ್ಪ ಬರಲು ತಯಾರಿಲ್ಲ. ಇಷ್ಟು ವರ್ಷ ಬಾಳಿರುವ ಈ ಮನೆಯನ್ನು, ಈ ಊರನ್ನು ಬಿಟ್ಟು ಬರುವುದೆ? ಒಲ್ಲೆ ಎನ್ನುತ್ತಾರೆ. ಒಂದಲ್ಲ ಒಂದು ದಿನ ಈ ಮುದುಕಿ ಮತ್ತು ದೊಡ್ಡಪ್ಪರನ್ನು ಬದಲಾಯಿಸಿಯೇ ತೀರುತ್ತೇನೆ ಎಂದು ಅಪ್ಪ ಶಪಥ ತೊಟ್ಟವರಂತೆ ಅವರನ್ನು ತಿದ್ದುವ ಕೆಲಸದಲ್ಲಿ ತೊಡಗಿದ್ದಾನೆ.

ಮುದುಕಿಅಪ್ಪನಹಾದಿಯಲ್ಲಿಬರುತ್ತಿದ್ದಾಳೇನೋ ಎನ್ನುವಂತೆ ಆಕೆ ಆಗೀಗ ಗಿರಿಮಲ್ಲಪ್ಪ ತನ್ನನ್ನು